**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 61/2023
ಪಿಡಬ್ಲು :6 ಸಿಡಬ್ಲು :18

| | |
|---|---|
| ಸಾಕ್ಷಿಯ ಹೆಸರು | : ಶ್ರೀ ಸಿದ್ದಪ್ಪ ಕಮತಗಿ |
| ಗಂಡನ ಹೆಸರು | : ಶ್ರೀ ಮಲ್ಲಪ್ಪ ಕಮತಗಿ |
| ವಯಸ್ಸು | : 61 ವರ್ಷ |
| ಉದ್ಯೋಗ | : ನಿವೃತ್ತ ಪಿ ಎಸ್ ಐ |
| ವಾಸ್ತವ್ಯ | : ಬಸವನ ಕುಡಚಿ, ಬೆಳಗಾವಿ |
| ದಿನಾಂಕ | : 18-06-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿನಾಂಕ 16-06-2022 ರಿಂದ 04-10-2023 ರ ವರೆಗೆ ನಾನು ಬೆಳಗಾವಿ ಜಿಲ್ಲೆ, ಖಾನಾಪೂರ ತಾಲೂಕು ಖನಾಪೂರ ಪೋಲಿಸ ಠಾಣೆ ಸಹಾಯ ಆರಕ್ಷಕ ಉಪನೀರಿಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕ 28-11-2022 ರಂದು ಸಂಜೆ 18.00 ಗಂಟೆ ಸಮಯದಲ್ಲಿ ಪ್ರಭಾರ ಠಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಪಿರ್ಯಾದುದಾರರಾದ ಮಂಗೇಶ ಕಾಂಬಳೆ ಇವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿಕೊಂಡು ಠಾಣಾ ಅಪರಾಧ ಸಂಖ್ಯೆ 229/2022 ನ್ನು ಭಾರತ ದಂಡ ಸಹಿಂತೆ ಕಲಂ 448, ಕಲಂ 323, ಕಲಂ 341, ಕಲಂ 504, ಕಲಂ 506 ಸಹ ಕಲಂ 34 ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ ನೀಷೆಧ ಕಾಯ್ದು ಕಲಂ 3(1)(r) 3(1)(s), 3(2)(v-a) ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮೂಲ ದೂರು ಹಾಗೂ ಪ್ರಥಮ

ವರ್ತಮಾನ ವರದಿಯನ್ನು 18.30 ಗಂಟೆಗೆ ಚಾಸಾ–9 ಪ್ರವೀಣ ಆರ್. ವಸ್ತ್ರದ ಸಿ ಪಿ ಸಿ 3194 ಅವರ ಮುಖಾಂತರ 3 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ. ಅದರ ನಕಲನ್ನು ನನ್ನ ಮೇಲಾಧಿಕಾರಿ ಕಳುಹಿಸಿಕೊಟ್ಟಿದ್ದೇನೆ ಹಾಗೂ ಫೋನ ಮುಖಾಂತರ ನನ್ನ ಮೇಲಾಧಿಕಾರಿಗಳಿಗೆ ತಿಳಿಸಿದ್ದೇನೆ. ದೂರು, ಅದರ ಮೇಲಿನ ಹಿಂಬರಹ ಮತ್ತು ತಮ್ಮ ಸಹಿಯನ್ನು ಗುರುತಿಸಿದ್ದಾರೆ. ದೂರನ್ನು ಈಗಾಗಲೇ ನಿಪಿ–1 ಎಂದು ಗುರುತಿಸಿದ್ದು ಹಿಂಬರಹವನ್ನು ನಿಪಿ–1(ಬಿ) ಎಂದು, ಸಾಕ್ಷಿ ಸಹಿಯನ್ನು ನಿಪಿ–1(ಸಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ–8 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–8 [ಎ] ಎಂದು ಗುರುತಿಸಲಾಯಿತು.

3. ಈ ಪ್ರಕರಣದ ಕಡತವನ್ನು ಜಿಲ್ಲಾ ಆರಕ್ಷಕ ಅಧಿಕ್ಷರ ಅನುಮತಿ ಮೇರೆಗೆ ಚಾಸಾ–19 ಡಿ ವೈ ಎಸ್ ಪಿ ಶಿವಾನಂದ ಕಟಗಿ ಅವರಿಗೆ ಮುಂದಿನ ತನಿಖೆಗಾಗಿ ನೀಡಿದ್ದೇನೆ. ದೂರು ನೀಡಲು ತಡವಾದ ಬಗ್ಗೆ ನಾನು ದೂರುದಾರರನ್ನು ವಿಚಾರಿಸಿದ್ದೇನೆ. ದೂರುದಾರರು ಆಸ್ಪತ್ರೆಯಲ್ಲಿ ಉಪಚಾರ ಹೊಂದಿ ನಂತರ ಮನೆಯಲ್ಲಿ ವಿಚಾರ ಮಾಡಿ ದೂರು ನೀಡಲು ತಡವಾಗಿರುತ್ತದೆ ಎಂದು ಹೇಳಿದ್ದಾರೆ.

**ಪಾಟೀ ಸವಾಲು: ಶ್ರೀ.ಸಿ.ಆರ್.ಎನ್ ವಕೀಲರಿಂದ ಆರೋಪಿತರ ಪರವಾಗಿ**

4. ನಾನು ದೂರುದಾರರನ್ನು ವಿಚಾರಿಸಿದಾಗ ಅವರು ಖಾನಾಪೂರ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ ಎಂದು ಹೇಳಿದ್ದಾರೆ. ದಿನಾಂಕ 28–11–2022 ರಂದು ನಾನು ಮಧ್ಯಾಹ್ನ 2.00 ಕರ್ತವ್ಯಕ್ಕೆ ಹಾಜರಾಗಿದ್ದೇನು. ದೂರುದಾರರು ಖಾನಾಪೂರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ನಮ್ಮ ಠಾಣೆಗೆ ಎಮ್ ಎಲ್ ಸಿ ಬಂದಿತ್ತು. ಆಸ್ಪತ್ರೆಯ ಸಿಬ್ಬಂದಿಯವರು ನೇರವಾಗಿ ಠಾಣೆಗೆ ಬಂದು ಎಮ್ ಎಲ್ ಸಿ ನೀಡಿದ್ದರು. ಆ

ರೀತಿ ಎಷ್ಟು ಗಂಟೆಗೆ ಬಂದು ನೀಡಿದ್ದರು ಎಂದು ಈಗ ಹೇಳಲು ಆಗುವುದಿಲ್ಲ. ದೂರುದಾರರಾದ ಗಾಯಳು ದಿನಾಂಕ 27ನೇ ತಾರಿಖು ಆಸ್ಪತ್ರೆಗೆ ಹೋಗಿದ್ದು ಅದೇ ದಿನ ಎಮ್ ಎಲ್ ಸಿ ಬಂದಿತ್ತು.ಆ ರೀತಿ ಎಮ್ ಎಲ್ ಸಿ ಬಂದ ಬಗ್ಗೆ ಠಾಣಾ ದಿನಚರಿ ಪುಸ್ತಕದಲ್ಲಿ ನಮೂದಿದೆ.

5. ದಿನಾಂಕ 27-11-2022 ರಂದು ಎಮ ಎಲ್ ಸಿ ಬಂದಾಗ ಕರ್ತವ್ಯದಲ್ಲಿದ್ದ ಪೋಲಿಸರು ಆಸ್ಪತ್ರೆಗೆ ಭೇಟಿ ನೀಡಿದ್ದರು. ನಾನು ಪ್ರಭಾರ ಕರ್ತವ್ಯವನ್ನು ವಹಿಸಿಕೊಳ್ಳುವಾಗ ಹಿಂದಿನ ದಿನದ ಎಮ್ ಎಲ್ ಸಿ ಬಗ್ಗೆ ವಿಚಾರಿಸಿದ್ದೇನೆ ಅವರು ಆಸ್ಪತ್ರೆಗೆ ಹೋಗಿದ್ದೇನೆ ಎಂದು ಹೇಳಿದ್ದಾರೆ. ದೂರುದಾರರು ನೀಡಿದ ದೂರನ್ನು ಈ ಹಿಂದೆ ಬಂದಿದ್ದ ಎಮ್ ಎಲ್ ಸಿ ಯೊಂದಿಗೆ ಅಳವಡಿಸಿದ್ದೇನೆ. ಚಾಸಾ-19 ರವರಿಗೆ ಪ್ರಕರಣದ ಕಡತದೊಂದಿಗೆ ಎಮ್ ಎಲ್ ಸಿ ಸಹ ನೀಡಿದ್ದೇನೆ. ದೂರ ನೀಡಲು ದೂರುದಾರರು ಒಬ್ಬರೆ ಬಂದಿದ್ದರು. ಆ ರೀತಿ ಬರುವಾಗಲೆ ದೂರನ್ನ ತಯಾರಿಸಿಕೊಂಡು ಬಂದಿದ್ದರು. ನಮ್ಮ ಠಾಣೆಗೆ ಯಾವುದೆ ಎಮ್ ಎಲ್ ಸಿ ಬಂದಿರಲಿಲ್ಲ ಎನ್ನುವುದು ಸರಿಯಲ್ಲ. ನಾನು ದೂರುದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.